ಕಳ್ಳಂಬೆಳ್ಳ ವಿಧಾನಸಭಾ ಕ್ಷೇತ್ರದಲ್ಲಿರುವ ಪ್ರಾಥಮಿಕ ಶಾಲೆ ಮಿಡಲ್ ಸ್ಕೂಲುಗಳಿಗೆ ಶಿಕ್ಷಕರ ನೇಮಕಾತಿ

೧೨೮೮ ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ ಕನ್ನಡ ಮಂತ್ರಿ ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳ್ಳಂಬೆಳ್ಳ ವಿಧಾನ ಸಭಾ ಕ್ಷೇತ್ರದಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆ, ಮಿಡ್ಲ್ ಸ್ಕೂಲುಗಳಿಗೆ ಮೂಲತಃ ಯಾವಾಗ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆ ಮಂಜೂರಾಗಿದೆ ?

ಆ) ಈ ಶಾಲೆಗಳಿಗೆ ಮಂಜೂರಾದ ಶಿಕ್ಷಕರ ಹುದ್ದೆಯು ಮಕ್ಕಳ ಸಂಖ್ಯೆಗನುಗುಣವಾಗಿಲ್ಲ ವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಶಾಲೆಗಳಲ್ಲಿರುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡಲು ಕೈಗೊಳ್ಳುವ ಕ್ರಮಗಳೇನು ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ೧೯೬೧ ರಿಂದ ೧೯೮೮ ರವರೆಗೆ ಕ್ರಮವಾಗಿ ೧೬೫ ಪ್ರಾಥಮಿಕ ಹಾಗೂ ೧೦೨ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಮಂಜೂರು ಮಾಡಲಾಗಿದೆ.

ಆ) ಬಂದಿದೆ.

ಇ) ಶೀಘ್ರದಲ್ಲೇ ತುಂಬಲಾಗುವುದು.

ತುಮಕೂರಿನಲ್ಲಿನ ಅನಧಿಕೃತ ಬಡಾವಣೆ

೧೩೩೩. ಶ್ರೀ ಕೆ. ಲಕ್ಕಪ್ಪ. (ಕುಣಿಗಲ್)—ಮಾನ್ಯ ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುಮಕೂರಿನಲ್ಲಿ ಆರು ತಿಂಗಳ ಅವಧಿಯಲ್ಲಿ ಅನಧಿಕೃತ ಬಡಾವಣೆಗಳನ್ನು ಮಂಜೂರು ಮಾಡಿರುವ ಸಂಖ್ಯೆ.

ಆ) ನಿವೇಶನಗಳ ವಿತರಣೆ ಸಂಖ್ಯೆ, ನಿರ್ಮಾಣ ಮಾಡಿರುವ ಸಂಖ್ಯೆ, ನಿರ್ಮಾಣ ಮಾಡುತ್ತಿರುವ ಸಂಖ್ಯೆ.

ಇ) ಹಕ್ಕು ದಾಖಲಾತಿಗಳು ಇಲ್ಲದೆ ಸುಮಾರು ೪೦೦೦ ಅಥವಾ ಅದಕ್ಕಿಂತಲೂ ಹೆಚ್ಚಿನ ನಿವೇಶನಗಳನ್ನು ಮಂಜೂರು ಮಾಡಲಾಗಿದೆಯೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು) —

ಅ) ಇಲ್ಲ.

ಆ) ಇಲ್ಲ.

ಇ) ಇಲ್ಲ.

ಅಧ್ಯಕ್ಷರು.—ಪ್ರಶ್ನೆ ಮುಂದಿಸಲಾಯಿತು.